ಇಬ್ಬರೂ ಬೈಟೂ ಮಾಡಿಕೊಳ್ಳೋಣ' ಎಂದು ಕೇಳಿದ. 'ನನಗೆ ಸಾಕು ಮಾರಾಯಾ.. ನಿನಗೆ ಬೇಕಿದ್ರೆ ಇನ್ನೊಂದು ಪಿಂಟು ಹೇಳು..' ಎಂದು ಅನ್ಯಮನಸ್ಕನಾಗಿ ಉತ್ತರಿಸಿ ಹುರಿದ ಗೋಡಂಬಿಯನ್ನು ತಿನ್ನತೊಡಗಿದೆ. ತಲೆಗೆ ಏರಿದ್ದ ಬಿಯರಿನ ಮತ್ತಿನೊಂದಿಗೆ ಹೇಮಾವತಿ ಮತ್ತು ಗಿರಿಧರ ನನ್ನ ಸುತ್ತ ಗಿರಗಿರನೆ ತಿರುಗುತ್ತಿರುವಂತೆ ಭಾಸವಾಯಿತು.

ಒಂದು ಪಿಂಟು ಬಿಯರಿಗೆ ಆರ್ಡರ್ ಮಾಡಿ ಕುಳಿತು ಸಿಗರೇಟು ಹಚ್ಚಿದ ಸುಬ್ರಹ್ಮಣ್ಯನಿಗೆ 'ಆಮೇಲೇನಾಯ್ತು ಸುಬ್ಬೂ..' ಎಂದು ಮೆಲ್ಲನೆ ಕೇಳಿದೆ. ಆಮೇಲೆ ಈ ಗಿರಿಧರ ಹೇಗೋ ಎಂ.ಕಾಂ ಪರೀಕ್ಷೆ ಪಾಸಾಗಿ ಮೈಸೂರಿನಿಂದ ಮಳವಳ್ಳಿಗೆ ಬಂದು ದೇವದಾಸನಾದ. ಯಾವ ದುರಭ್ಯಾಸವೂ ಅವನಿಗಿರಲಿಲ್ಲ. ಕುಡಿಯೋದು ಕಲಿತುಕೊಂಡು ದಿನವೂ ಕುಡಿದು ಅವರ ತೋಟದ ಮನೆಯಲ್ಲಿ ದಿನವೆಲ್ಲಾ ಮಲಗಿಕೊಳ್ಳುತ್ತಿದ್ದ.. ನಮ್ಮ ಚಿಕ್ಕಮ್ಮ ಇವನಿಗೊಂದು ಮದುವೆ ಮಾಡಿದರೆ ಸರಿಯಾಗುತ್ತಾನೆ ಅಂತ ಈ ಹೇಮಾವತಿಗಿಂತ ಇನ್ನೂ ಸುಂದರವಾಗಿರೋ ಎಷ್ಟೋ ಹುಡುಗಿಯರ ಸಂಬಂಧ ಹುಡುಕಿದ್ದಾರೆ.. ಇವನು ಯಾರನ್ನೂ ಒಪ್ಪಿಕೊಂಡಿಲ್ಲ. ಮದುವೇನೇ ಆಗುವುದಿಲ್ಲ ಅಂತ ಹಟ ಹಿಡಿದು ಕುಳಿತಿದ್ದಾನೆ. ನಮ್ಮ ಚಿಕ್ಕಮ್ಮ ಜಾಗ ಬದಲಾಯಿಸಿದರೆ ಸ್ವಲ್ಪ ಸರಿ ಹೋಗಬಹುದು ಅಂತ ಬೆಂಗಳೂರಿಗೆ ಕರೆದುಕೊಂಡು ಬಂದು ಆವಲಹಳ್ಳಿನಲ್ಲಿ ಮನೆ ಮಾಡಿ ಕೊಟ್ಟು ಏನಾದರೂ ಮಾಡಿ ಅವನಿಗೊಂದು ಕೆಲಸ ಕೊಡಿಸೋ ಸುಬ್ಬೂ.. ಅಂತ ನನಗೆ ಫೋನು ಮಾಡಿ ಗೋಳಿಟ್ಟುಕೊಂಡರು.. ಸುಬ್ರಹ್ಮಣ್ಯ ಸರ್ವರ್ ತಂದಿಟ್ಟಿದ್ದ ಬಿಯರನ್ನು ಮಗ್ಗಿಗೆ ಬಗ್ಗಿಸಿಕೊಂಡು ಒಂದು ಸಿಪ್ ಎಳೆದು ಹೇಳಿದ.

'ನನಗೆ ಇನ್ನೇನೂ ಬೇಜಾರಿಲ್ಲ ಸುನಿಲ್.. ಆ ಹುಡುಗಿ ತಂದೆಗೂ ಪ್ಯಾರಾಲಿಸಿಸ್ ಆಗಿದೆಯಂತೆ.. ಅವರ ತಾಯಿ ಕಷ್ಟಪಟ್ಟು ಸಂಸಾರ ನಿಭಾಯಿಸ್ತಾ ಇದಾರಂತೆ.. ಇವನು ಅವಳಿಗೆ ಬಾಯಿಬಿಟ್ಟು ನಿನ್ನನ್ನ ಪ್ರೀತಿಸ್ತಾ ಇದೀನಿ ಮದುವೆ ಆಗ್ತೀನಿ ಅಂತ ಹೇಳಿದ್ದಿದ್ರೆ ಅವಳೂ ಯಾರನ್ನೋ ಮದುವೆಯಾಗುವ ಬದಲು ಹುಡುಗ ಚೆನ್ನಾಗಿದಾನೆ.. ಓದಿದಾನೆ.. ಮನೆಯ ಕಡೇನೂ ಅನುಕೂಲವಾಗಿದಾರೆ.. ಒಂದೇ ಊರು ಮನೆ.. ಅಪ್ಪ ಅಮ್ಮನ್ನೂ ನೋಡಿಕೊಂಡು ಅವರ ಹತ್ತಿರವೇ ಇರಬಹುದು ಅಂತ ಖುಷಿಯಿಂದಲೇ ಒಪ್ಪಿಕೊಂಡಿರೋಳು..' ಎಂದವನು ನಿಟ್ಟುಸಿರೊಂದನ್ನು ಬಿಟ್ಟು ಏನನ್ನೋ ಯೋಚಿಸುತ್ತಾ ಕುಳಿತ. ನಾನೂ ಮೌನವಹಿಸಿದೆ.

ಆಗಿದ್ದು ಆಗಿಹೋಯಿತು ಬಿಡು.. ಈಗ ಪ್ರಪಂಚವೇನು ಮುಳುಗಿ ಹೋಗಿದೆಯಾ..? ಗತಿಸಿಹೋದ ಯಾವುದೋ ಭ್ರಮಾತ್ಮಕ ಘಟನೆಯೊಂದಕ್ಕೆ ಜೋತುಬಿದ್ದು ಮನುಷ್ಯ ತನ್ನ ಜೀವನದಲ್ಲಿ ಪರ್ಯಾಯಗಳನ್ನು ಹುಡುಕಿಕೊಳ್ಳದೇ ಹೋದರೆ ವಿಸ್ತಾರವಾದ ಬದುಕನ್ನು ನೆಮ್ಮದಿಯಿಂದ ಕಳೆಯಲು ಆಗುತ್ತದಾ..? ಸುಬ್ರಹ್ಮಣ್ಯ ಅಸಹನೆಯಿಂದ ಬಡಬಡಿಸತೊಡಗಿದ.

'ಆದರೆ ಈ ಗಿರಿಧರ ನಾಪತ್ತೆಯಾಗಿದ್ದು ಯಾಕೆ ಸುಬ್ಬೂ..' ವಿಷಯವನ್ನು ಬದಲಿಸಿ ನಾನು ತುಸು ಕುತೂಹಲದಿಂದಲೇ ಕೇಳಿದೆ.

'ಅದು ಇನ್ನೊಂದು ಕತೆ ನೋಡು.. ಇವನು ಮನೆ ಮಾಡಿಕೊಂಡಿದ್ದನಲ್ಲಾ ಅದರ ಓನರ್ ಒಬ್ಬಳು ಶ್ರೀಮಂತ ಮುದುಕಿ. ಕೆಳಗಡೆ ಗ್ರೌಂಡ್ ಫ್ಲೋರಿನಲ್ಲಿ ಒಂಟಿಯಾಗಿ ವಾಸ ಮಾಡ್ತಾ ಇದ್ದಳು.. ಅವಳ ಗಂಡ ತೀರಿ ಹೋಗಿ ಬಹಳ ದಿನವಾಗಿದೆಯಂತೆ.. ಇದ್ದೋನು ಒಬ್ಬ ಮಗ ಫಾರಿನ್‌ನಲ್ಲಿದ್ದಾನಂತೆ.. ಯಾರೋ ಅವಳನ್ನ ಕೊಲೆ ಮಾಡಿ ಮನೆಯಲ್ಲಿದ್ದ ಒಡವೆ, ಹಣ ಎಲ್ಲಾ ದೋಚಿಕೊಂಡು ಹೋದರು.. ಇವನು ಮೇಲುಗಡೆ ಮನೆಯಲ್ಲಿ ಬಾಡಿಗೆಗೆ ಇದ್ದನಲ್ಲಾ ಅದಕ್ಕೆ ಪೊಲೀಸಿನೋರು ಮಾಮೂಲಾಗಿ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ವಿಚಾರಿಸಿದಾರೆ.. ಇವನು ಅಲ್ಲಿಯೂ ಸರಿಯಾಗಿ ಬಾಯಿಬಿಟ್ಟಿಲ್ಲ.. ಪೊಲೀಸಿನೋರಿಗೆ ಸ್ವಲ್ಪ ಅನುಮಾನ ಬಂದು ನೀನು ಎಲ್ಲೂ ಹೋಗಬಾರದು.. ನಾವು ಕರೆದಾಗ ಸ್ಟೇಷನ್ನಿಗೆ ಬರಬೇಕು ಅಂತ ಹೇಳಿ ಇವನ ಮೊಬೈಲ್ ನಂಬರ್ ತಗೊಂಡಿದಾರೆ.. ಇವನು ಅಷ್ಟಕ್ಕೇ ಪೂರ್ತಿಯಾಗಿ ಹೆದರಿಕೊಂಡು ನಮ್ಮ ಚಿಕ್ಕಮ್ಮನಿಗೂ ಹೇಳದೆ ಎಲ್ಲೋ ಹೊರಟು ಹೋಗಿದ್ದಾನೆ' ಎಂದವನು ಮಗ್ಗಿನಲ್ಲಿ ಉಳಿದಿದ್ದ ಬಿಯರನ್ನು ಎತ್ತಿ ಕುಡಿದು ಖಾಲಿ ಮಾಡಿ ಮತ್ತೆ ಮಾತನಾಡಿದ.




**ಬದುಕು**

ಹುಟ್ಟುವ ಮುಂಚೆಯೇ
ತಾಯಿಯ ಗರ್ಭದಲ್ಲಿ
ಬದುಕಿ ನೋಡಿದ್ದೇನೆ
ಬದುಕು ಹೊಸದೇನಲ್ಲ!

★ ಶ್ರೀನಿವಾಸ ಕುಂಡಂತಾಯ

'ಈಗ ನೋಡು.. ಆ ಮುದುಕಿಯನ್ನು ಕೊಲೆ ಮಾಡಿದವರು ಪೊಲೀಸಿನವರಿಗೆ ಸಿಕ್ಕಿ ಬಿದ್ದಿದಾರೆ.. ಆದರೂ ಇವನ ಪತ್ತೆಯಿಲ್ಲ.. ಅದೇ ಪೊಲೀಸ್ ಸ್ಟೇಷನ್ನಿಗೆ ಹೋಗಿ ನಮ್ಮ ಚಿಕ್ಕಮ್ಮ ಕಂಪ್ಲೇಂಟೂ ಕೊಟ್ಟಿದಾರೆ.. ಒಟ್ಟಿನಲ್ಲಿ ಇವನು ಮಾಡಿಕೊಂಡ ತಪ್ಪಿಗೆ ನಮ್ಮ ಚಿಕ್ಕಮ್ಮ ಶಿಕ್ಷೆ ಅನುಭವಿಸುತ್ತಾ ಇದಾರೆ.. ಅವರು ಗೋಳಾಡುವುದನ್ನ ನನ್ನ ಕಣ್ಣಿನಿಂದ ನೋಡುವುದಕ್ಕೆ ಆಗುವುದಿಲ್ಲ ಮಾರಾಯ..' ಎಂದು ಕಣ್ಣುಗಳಲ್ಲಿ ನೀರು ತುಂಬಿಕೊಂಡ.

ನಾನು ಸುಬ್ರಹ್ಮಣ್ಯನಿಗೆ ಸಮಾಧಾನ ಹೇಳಿದೆ. 'ಗಿರಿಧರ ವಾಪಾಸು ಬಂದ ಮೇಲೆ ಫೋನು ಮಾಡಿ ತಿಳಿಸು.. ಹೇಗಾದರೂ ಮಾಡಿ ಇಲ್ಲಿಯೇ ಅವನಿಗೊಂದು ಕೆಲಸ ಕೊಡಿಸುತ್ತೇನೆ..' ಎಂದು ಭರವಸೆ ನೀಡಿದೆ. 'ಸುಬ್ಬೂ ನೀನು ಹೈದರಾಬಾದ್ ತಲುಪುವುದು ಬೆಳಿಗ್ಗೆಯಾಗಬಹುದು.. ಇಲ್ಲಿಯೇ ಊಟ ಮುಗಿಸಿಕೊಂಡು ಹೋಗು..' ಎಂದೆ.

'ಇಲ್ಲ ಮಾರಾಯ ಸದ್ಯಕ್ಕೆ ಹಸಿವಿಲ್ಲ.. ದಾರಿಯಲ್ಲಿ ಬಸ್ಸನ್ನು ಊಟಕ್ಕೆ ನಿಲ್ಲಿಸಿದಾಗ ಏನನ್ನಾದರೂ ತಿಂದರಾಯಿತು..' ಎಂದು ಎದ್ದ. ಬಿಲ್ ಕೊಟ್ಟು ಪಬ್ಬಿನಿಂದ ಇಬ್ಬರೂ ಹೊರಗೆ ಬಂದೆವು. ಸುಬ್ರಹ್ಮಣ್ಯನನ್ನು ಬಸ್ಸು ಹತ್ತಿಸಿ ಬೀಳ್ಕೊಟ್ಟು ಮನೆಯ ಕಡೆಗೆ ಹೊರಟೆ.

ರಸ್ತೆಯಲ್ಲಿ ಕಾರು ನಡೆಸುತ್ತಿದ್ದ ನನ್ನ ಮನಸ್ಸಿನಲ್ಲಿ ಭಗ್ನಪ್ರೇಮದ ಭ್ರಮೆಯನ್ನು ಮೆಟ್ಟಿ ನಿಂತು ಬದುಕಿನ ವಾಸ್ತವವನ್ನು ಅಪ್ಪಿಕೊಂಡು ಗೆದ್ದ ಹೇಮಾವತಿಯ ಬಗ್ಗೆ ಅಪಾರ ಅಭಿಮಾನವೂ, ಭ್ರಮೆಯಿಂದ ಹೊರಬರದೇ ಜೀವನದಲ್ಲಿ ಸೋಲುತ್ತಿರುವ ಗಿರಿಧರನ ಬಗ್ಗೆ ತೀವ್ರ ಕನಿಕರವೂ ಮೂಡಿ ನಿಂತಿದ್ದವು. ನಾನು ಒಮ್ಮೆಯೂ ಕಣ್ಣಾರೆ ಕಂಡಿಲ್ಲದ ವ್ಯಕ್ತಿಯಾದರೂ ಗಿರಿಧರನನ್ನು ನೆನೆದು ನನಗೆ ಅತೀವ ವೇದನೆಯಾಗುತಿತ್ತು.

## ಹೇಮಾವತಿ

ಹೊರಗೆ ಕಸಗುಡಿಸುತ್ತಿದ್ದ ಮನೆಗೆಲಸದ ನಿಂಗಮ್ಮ ಒಳಗೆ ಬಂದು 'ಅಮ್ಮಾರೇ.. ನಿಮ್ಮನ್ನು ಕೇಳಿಕೊಂಡು ಯಾರೋ ಬಂದಿದ್ದಾರೆ..' ಎಂದು ಹೇಳಿದಾಗ ನಾನು ಪಾಪೂವಿಗೆ ಹಾಲು ಕುಡಿಸುತ್ತಿದ್ದವಳು ಒಂದು ಕ್ಷಣ ಬೆಕ್ಕಸ ಬೆರಗಾದೆ. ನನ್ನನ್ನು ಹುಡುಕಿಕೊಂಡು ಈ ಮನೆಗೆ ನನ್ನ ಅಮ್ಮನನ್ನು ಹೊರತುಪಡಿಸಿ ಬೇರೆ ಯಾರೂ ಇದುವರೆಗೆ ಬಂದಿಲ್ಲ.. ಯಾರೇ ಬಂದರೂ ಅವರು ಹುಡುಕಿಕೊಂಡು ಬರುವುದು ನನ್ನ ಗಂಡನನ್ನು ಮಾತ್ರ. 'ನನ್ನನ್ನು ಕೇಳಿದರೋ, ಯಜಮಾನರನ್ನು ಕೇಳಿದರೋ ನಿಂಗಮ್ಮಾ..' ಎಂದು ದೃಢಪಡಿಸಿಕೊಳ್ಳುವ ಸಲುವಾಗಿಯೇ ಅವಳನ್ನು ಮತ್ತೆ ಪ್ರಶ್ನಿಸಿದೆ.

'ನಿಮ್ಮನ್ನೇ ಕಣ್ರಮ್ಮಾ.., ಹೇಮಾವತಿಯವರು ಇದ್ದಾರಾ ಅಂತ ಕೇಳಿದರು.. ಹೊರಗಡೆ ಗೇಟಿನ ಹತ್ತಿರ ನಿಂತಿದ್ದಾರೆ..' ಎಂದು ನಿಂಗಮ್ಮ ನಿಸ್ಸಂಶಯವಾಗಿ ಉತ್ತರಿಸಿದಾಗ ನನಗೆ ಮತ್ತಷ್ಟು ಆಶ್ಚರ್ಯವಾಯಿತು. ನನ್ನ ಗಂಡನೇನಾದರೂ ಮನೆಯಿಂದ ಯಾವುದೋ ಲೆಕ್ಕದ ಪುಸ್ತಕವನ್ನು ತರಲು ನನ್ನ ಹೆಸರು ಹೇಳಿ ಅವರ ಕಚೇರಿಯಿಂದ ಯಾರನ್ನೋ ಕಳುಹಿಸಿರಬಹುದು ಎಂದು ಊಹಿಸಿಕೊಂಡೆ. ಪಾಪೂವಿನ ಬಾಯಿಂದ ಎದೆಯನ್ನು ಮೆಲ್ಲಗೆ ಹೊರತೆಗೆದು ತೊಟ್ಟಿದ್ದ ನೈಟಿಯನ್ನು ಸರಿಪಡಿಸಿಕೊಂಡು ಪಾಪೂವನ್ನು ಎತ್ತಿಕೊಂಡು ಹೊರಗೆ ಬಂದು ಗೇಟಿನತ್ತ ನಿಧಾನವಾಗಿ ನಡೆದುಹೋದೆ.

ನಾನು ಗೇಟಿನ ಹತ್ತಿರವಾದಂತೆ ಎತ್ತರದ ಕಬ್ಬಿಣದ ಕಮಾನು ಗೇಟಿನ ಸರಳುಗಳ ಹಿಂದೆ ನಿಂತಿದ್ದ ವ್ಯಕ್ತಿಯನ್ನು ಕಂಡು ಒಂದು ಕ್ಷಣ ಅವಕ್ಕಾಗಿ ಹೋದೆ. ನಾನು ಜೀವನದಲ್ಲಿ ಮತ್ತೊಮ್ಮೆ ಅದರಲ್ಲೂ ನಮ್ಮ ಮನೆಯ ಪ್ರವೇಶದ್ವಾರದ ಬಳಿಯಲ್ಲಿ ಅವರನ್ನು ನೋಡುತ್ತೇನೆಂದು ಕನಸು ಮನಸಿನಲ್ಲಿಯೂ ಅಂದುಕೊಂಡಿರಲಿಲ್ಲ! ಅವರು ಎಂದೋ ನನ್ನ ಮನಸ್ಸಿನಿಂದ ಮಾಸಿ ಹೋಗಿದ್ದರೂ ಅವರ ಚಿತ್ರ ಮಾತ್ರ ನನ್ನ ನೆನಪಿನ ಭಿತ್ತಿಯಲ್ಲಿ ಅಚ್ಚಳಿಯದೇ ಉಳಿದಿತ್ತು. ನಾನೇನಾದರೂ ಕನಸು ಕಾಣುತ್ತಿದ್ದೇನೆಯೇ ಎಂದುಕೊಂಡು